ಎಲ್ಲ ಸಮಯಕ್ಕೂ, ಎಲ್ಲ ವಯೋಮಾನದವರೂ ತೊಡಲು ಹೊಂದಿಕೆಯಾಗುವಂತಹ ವಿನ್ಯಾಸಗಳು ವಸ್ತ್ರ ವಿನ್ಯಾಸಕರ ಕೈಯಲ್ಲಿ ಅರಳುತ್ತಿವೆ. ಹೀಗಾಗಿ ಲೇಸ್ ಡ್ರೆಸ್‌ಗೆ ಮೊದಲಿದ್ದ ಮಡಿವಂತಿಕೆಯ ಹಂಗು ಈಗಿಲ್ಲ.

ಒಳಭಾಗದಲ್ಲಿ ನೈಲಾನ್ ಅಥವಾ ಕಾಟನ್ ಬಟ್ಟೆ ಬಳಸಿ ಮೇಲ್ಭಾಗದಲ್ಲಿ ಲೇಸ್ ಬಟ್ಟೆಯಲ್ಲಿ ತಯಾರಿಸಿದ ಟಾಪ್ ಹೆಚ್ಚು ಟ್ರೆಂಡ್‌ನಲ್ಲಿದೆ. ತೋಳಿನ ಭಾಗ ಪಾರದರ್ಶಕವಾಗಿ ಕಾಣುವಂತೆ ಮಾಡುವ ಈ ಟಾಪ್ ಯುವತಿಯರ ನೆಚ್ಚಿನ ಆಯ್ಕೆ. ಕೆಲವರಿಗೆ ಸ್ಲೀವ್‌ಲೆಸ್ ಡ್ರೆಸ್ ತೊಡುವ ಬಯಕೆ ಇರುತ್ತದೆ. ಆದರೆ ಅಭ್ಯಾಸ ಇರುವುದಿಲ್ಲ. ಇನ್ನು ಕೆಲವರು ಸ್ಲೀವ್‌ಲೆಸ್ ಡ್ರೆಸ್ ತೊಡಲು ಮುಜುಗರಪಡುತ್ತಾರೆ. ಅಂಥವರಿಗೆ ಲೇಸ್ ಟಾಪ್ ಹೇಳಿ ಮಾಡಿಸಿದಂತಿವೆ. ಮೊದಮೊದಲು ಪಾರದರ್ಶಕ ತೋಳು ಇರುವ ಟಾಪ್ ತೊಟ್ಟು ಬೀಗಬಹುದು. ಬಳಿಕ ಸ್ಲೀವ್‌ಲೆಸ್ ಡ್ರೆಸ್ ನಿಧಾನಕ್ಕೆ ಅಭ್ಯಾಸವಾಗುತ್ತದೆ.

## ಎಲ್ಲದರ ಜೊತೆಗೆ ನಂಟು

15ನೇ ಶತಮಾನದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ರಾಜ, ರಾಣಿಯರ ಕರವಸ್ತ್ರಗಳ ಅಂಚುಗಳಿಗೆ ಲೇಸ್ ಬಳಸಲಾಗುತ್ತಿತ್ತು. ಲೇಸ್ ಅಂಚುಳ್ಳ ಕರವಸ್ತ್ರ ಶ್ರೀಮಂತಿಕೆಯ ಸಂಕೇತವೂ ಆಗಿತ್ತು. ಕಾಲ ಹೊರಳಿದಂತೆ ಲೇಸ್ ನಂಟು ಉಡುಗೆಗೂ ಹತ್ತಿತು. ರಾಜ, ರಾಣಿಯರ ಉಡುಗೆಗಳು ಲೇಸ್‌ನಿಂದಲೇ ತಯಾರಾಗುತ್ತಿದ್ದವು. ಲೈನಿಂಗ್ ಇರುವ ಲೇಸ್ ಡ್ರೆಸ್‌ಗಳೂ ಅಂದು ಟ್ರೆಂಡ್‌ನಲ್ಲಿದ್ದವು. ದುಬಾರಿ ವಸ್ತ್ರ ಎನಿಸಿಕೊಂಡಿದ್ದ ಲೇಸ್ ಡ್ರೆಸ್ ಈಗ ಸಾಮಾನ್ಯರ ವಾರ್ಡ್‌ರೋಬನ್ನೂ ಆವರಿಸಿವೆ. ಅಪ್ಸರಮಟ್ಟಿಗೆ ತನ್ನ ಕಬಂಧಬಾಹುವನ್ನು ಎಲ್ಲ ಬಗೆಯ ವಿನ್ಯಾಸಗಳಿಗೂ ಚಾಚಿದೆ ಈ ಲೇಸ್.

ಟಾಪ್‌ಗಳಿಗೆ ಮಾತ್ರವೇ ಬಳಕೆಯಾಗುತ್ತಿದ್ದ ಲೇಸ್ ವಿನ್ಯಾಸ ಸೀರೆ, ಬ್ಲೌಸ್‌ಗೂ ವಿಸ್ತರಿಸಿದೆ. ಸಾಂಪ್ರದಾಯಿಕ ದಿರಿಸು ತೊಟ್ಟು ಟ್ರೆಂಡಿಯಾಗಿ ಕಾಣಬೇಕೆಂದು ಬಯಸುವವರು ಲೇಸ್ ನಂಟು ಬೆಳೆಸಬಹುದು. ಲೇಸ್ ಸೀರೆಗಳು ಹಾಗೂ ನೆರಿಗೆ ಭಾಗದಲ್ಲಿ ಮಾತ್ರ ಲೇಸ್ ಬಳಸಿರುವ ಸೀರೆಗಳು ಹೆಚ್ಚು ಟ್ರೆಂಡಿಯಾಗಿವೆ. ಈ ಬಗೆಯ ಸೀರೆ ಗ್ಲಾಮರಸ್ ನೋಟ ನೀಡುತ್ತವೆ.

## ಹೀಗೆ ಮ್ಯಾಚ್ ಮಾಡಿಕೊಳ್ಳಿ

ಲೇಸ್ ಟಾಪ್ ಅನ್ನು ಎಲ್ಲ ಶೈಲಿಯ ಬಾಟಮ್‌ನೊಂದಿಗೂ ಮ್ಯಾಚ್ ಮಾಡಿಕೊಳ್ಳಬಹುದು. ಜೀನ್ಸ್ ಪ್ಯಾಂಟ್, ಬರ್ಮುಡಾ ಜೀನ್ಸ್, ತ್ರೀ ಫೋರ್ಥ್ ಪ್ಯಾಂಟ್, ಲೆಗ್ಗಿನ್ಸ್, ಜಗ್ಗಿನ್ಸ್, ಲಾಂಗ್ ಸ್ಕರ್ಟ್, ಶಾರ್ಟ್ ಸ್ಕರ್ಟ್, ಟೈಟ್ ಸ್ಕರ್ಟ್, ಅಂಬ್ರೆಲ್ಲಾ ಸ್ಕರ್ಟ್, ಧೋತಿ ಪ್ಯಾಂಟ್, ಪಟಿಯಾಲಾ, ಶಾರ್ಟ್ಸ್... ಎಲ್ಲದರೊಂದಿಗೂ ಮಿಕ್ಸ್ ಮ್ಯಾಚ್ ಮಾಡಿಕೊಳ್ಳಬಹುದು. ಲೇಸ್ ಶಾರ್ಟ್ ಫ್ರಾಕ್, ಲಾಂಗ್ ಫ್ರಾಕ್‌ಗಳೂ ಟ್ರೆಂಡ್‌ನಲ್ಲಿವೆ.

ಮದುಮಗಳ ಗೌನ್, ಸಂಜೆಯ ಸಮಾರಂಭಗಳು, ಮದುವೆ ಸಂದರ್ಭಕ್ಕೂ ಲೇಸ್ ವಿನ್ಯಾಸದ ಉಡುಗೆಗಳು ಅಚ್ಚುಮೆಚ್ಚು ಎನಿಸಿವೆ. ಕಡಿಮೆ ತೂಕದ, ತೆಳು ಬಟ್ಟೆಯ ಇವು ಹಿತದ ಅನುಭವ ನೀಡುತ್ತವೆ. ಈ ಕಾರಣಕ್ಕೆ ಚಿಕ್ಕ ಮಕ್ಕಳಿಗೂ ಇವು ಅಚ್ಚುಮೆಚ್ಚು.

‘ಕಮಿಸೋಲ್ ಟಾಪ್‌ಗೆ ಲೇಸ್ ಜಾಕೆಟ್ ತೊಟ್ಟು ಕಾಂಟ್ರಾಸ್ಟ್ ಬಣ್ಣದ ಪ್ಯಾಂಟ್ ಅಥವಾ ಸ್ಕರ್ಟ್ ಮ್ಯಾಚ್ ಮಾಡಿಕೊಳ್ಳಬಹುದು. ಇದಕ್ಕೆ ಮುತ್ತಿನ ಸಿಂಪಲ್ ನೆಕ್ಲೇಸ್, ಇಳಿ ಬೀಳುವ ಇಯರ್ ರಿಂಗ್ ಧರಿಸಬಹುದು. ಇದು ನಿಮ್ಮನ್ನು ಹೆಚ್ಚು ಟ್ರೆಂಡಿಯಾಗಿಸುತ್ತದೆ. ಬಿಳಿ ಅಥವಾ ಕಪ್ಪು ಬಣ್ಣದ ಲೇಸ್ ಟಾಪ್ ಹಾಗೂ ಬರ್ಮುಡಾ ಜೀನ್ಸ್ ಬಹುತೇಕ ಯುವತಿಯರ ಡ್ರೆಸ್ ಕೋಡ್ ಆಗಿದೆ. ಜತೆಗೆ ಲೇಸ್ ಟಾಪ್‌ನೊಂದಿಗೆ ಡೆನಿಮ್ ಶಾರ್ಟ್, ಡೆನಿಮ್ ಸ್ಕರ್ಟ್ ಹೆಚ್ಚು ಹೊಂದಿಕೆಯಾಗುತ್ತದೆ. ಲೇಸ್ ಟಾಪ್ ತೊಡುವಿರಾದರೆ ಮೈಮೇಲೆ ಆಭರಣಗಳು ಆದಷ್ಟು ಕಡಿಮೆ ಇದ್ದರೆ ಒಳಿತು. ಚಿನ್ನದ ಬಣ್ಣದ ಆಭರಣಗಳಿಗಿಂದ ಸಿಲ್ವರ್ ಬಣ್ಣದ ಆಭರಣಗಳು ಹೆಚ್ಚು ಸೂಕ್ತ’ ಎನ್ನುವ ಸಲಹೆ ದಾವಣಗೆರೆಯ ವಸ್ತ್ರ ವಿನ್ಯಾಸಕಿ ರೂಪಾ ಸಿಂಗಾರ್ ಅವರದ್ದು.

ಲೇಸ್ ಉಡುಗೆಗಳನ್ನು ಎಲ್ಲ ಕಾಲದಲ್ಲೂ ತೊಡಬಹುದಾದರೂ ಬೇಸಿಗೆ ಸಮಯ ಹೆಚ್ಚು ಸೂಕ್ತ. ಈ ಉಡುಗೆಯಲ್ಲಿ ಸರಾಗವಾಗಿ ಗಾಳಿಯಾಡುವುದರಿಂದ ದೇಹವನ್ನು ಸದಾ ತಂಪಾಗಿರಿಸುತ್ತವೆ. ಬೆವರು, ಸೆಕೆಯಿಂದ ದೂರವಿರಬಹುದು. ಈ ಬಟ್ಟೆಗಳ ತೂಕ ಕಡಿಮೆ ಇರುವುದರಿಂದ ದೇಹಕ್ಕೆ ಆರಾಮದಾಯಕ ಅನುಭವ ನೀಡುತ್ತವೆ. ■

## ಜತನದಿಂದ ಕಾಪಿಟ್ಟುಕೊಳ್ಳಿ

ಲೇಸ್ ಉಡುಗೆಗಳು ಹಗುರ ಹಾಗೂ ತೆಳುವಾಗಿರುವುದರಿಂದ ಬಹುಬೇಗ ಹರಿಯುವ ಸಾಧ್ಯತೆ ಇರುತ್ತದೆ. ಹಾಗಾಗಿ ಈ ಬಟ್ಟೆಗಳು ಹೆಚ್ಚು ಕಾಳಜಿ ಬೇಡುತ್ತವೆ. ಆಕಸ್ಮಿಕವಾಗಿ ಯಾವುದಾದರೂ ಕೊಂಡಿಗೆ ಸಿಲುಕಿಕೊಂಡರೆ ಸುಲಭದಲ್ಲಿ ಹರಿಯುತ್ತವೆ. ಒಂದು ವೇಳೆ ಲೇಸ್ ಕಡಿಮೆ ಗುಣಮಟ್ಟದ್ದಾಗಿದ್ದರೆ ಹೆಚ್ಚು ದಿನ ಬಾಳಿಕೆ ಬರುವುದಿಲ್ಲ. ಹಾಗಾಗಿ ಜಾಗ್ರತೆಯ ಆಯ್ಕೆ, ಹೆಚ್ಚು ಕಾಳಜಿ ಅಗತ್ಯ. ಈ ಬಟ್ಟೆಗಳನ್ನು ಮೆಷಿನ್‌ಗಿಂತ ಕೈಯಲ್ಲಿ ತೊಳೆಯುವುದು ಹೆಚ್ಚು ಸೂಕ್ತ.

